# ಬಿದಿರಿನ ಹೂದಾನಿ

ಈ ಹೂದಾನಿ ಪಿಂಗಾಣಿಯದ್ದಲ್ಲ. ಇಂಡೊನೇಷ್ಯಾದಲ್ಲಿ ಬೆಳೆಯುವ ಒಂದು ರೀತಿಯ ಬಿದಿರನ್ನು ಈ ರೀತಿ ವಿನ್ಯಾಸ ಮಾಡಲಾಗಿದೆ. ಇದರ ಮೇಲ್ಮೈಯನ್ನು ಹೆರೆಯುತ್ತಾ ಹೋದಂತೆಲ್ಲ ಚಿತ್ರದಲ್ಲಿರುವಂತೆ ಹೊಸಹೊಸ ವಿನ್ಯಾಸಗಳು ಮೂಡುತ್ತವೆ. ಎಷ್ಟೇ ವರ್ಷಗಳಾದರೂ ವಿನ್ಯಾಸ ಮಂಕಾಗುವುದಿಲ್ಲ, ಹೊಳಪು ಮಾಸುವುದಿಲ್ಲ. ಹುಳು ಹಿಡಿಯದು.

**– ಶ್ರೀನಾಥ್ ಕೊನೇಟಿ, ಬೆಂಗಳೂರು**





# ಶಿವಯೋಗಮಂದಿರದ ವಿಭೂತಿ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಶಿವಯೋಗಮಂದಿರದಲ್ಲಿ ತಯಾರು ಮಾಡುವ ವಿಭೂತಿ ಗಟ್ಟಿಗಳು ತುಂಬಾ ಪ್ರಸಿದ್ಧಿ ಪಡೆದಿವೆ. ನೂರಾರು ವರ್ಷಗಳಿಂದಲೂ ಇಲ್ಲಿ ವಿಭೂತಿ ಗಟ್ಟಿಯನ್ನು ಸಾಂಪ್ರದಾಯಕವಾಗಿ ತಯಾರು ಮಾಡಲಾಗುತ್ತಿದೆ. ಇಲ್ಲೇ ಇರುವ ಗೋಶಾಲೆಯಲ್ಲಿರುವ ಗೋವುಗಳ ಸೆಗಣಿಯನ್ನು ಬಳಸಿ ತಯಾರಿಸುವ ಭಸ್ಮಕ್ಕೆ ಸಾಕಷ್ಟು ಬೇಡಿಕೆಯೂ ಇದೆ. ಇಲ್ಲಿಗೆ ಭೇಟಿ ನೀಡುವ ಭಕ್ತರು, ಪ್ರವಾಸಿಗರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಇಲ್ಲಿ ವಿಭೂತಿಯನ್ನು ಖರೀದಿಸುವುದನ್ನು ಮರೆಯುವುದಿಲ್ಲ.

ವಿಭೂತಿ ಕೇಂದ್ರದಲ್ಲಿ ಸೇವೆ ಸಲ್ಲಿಸುವ ಮಹಿಳೆಯರು ದೂರದ ಊರುಗಳಿಂದ ಬಂದು –ಹೋಗುವವರಿಗೆ ಅದರ ತಯಾರಿಕೆಯ ಬಗ್ಗೆ ಮಾಹಿತಿಯನ್ನೂ ನೀಡುತ್ತಾರೆ.

**– ಮ.ಗು.ಬಸವಣ್ಣ, ನಂಜನಗೂಡು**

# ಗಡಿ ಸೂಚಿಸುವ ಕಲ್ಲುಗಳು

ಈ ಹಿಂದೆ ನಮ್ಮ ದೇಶವನ್ನು ಆಳಿದ ರಾಜ ಮನೆತನಗಳು ಹಲವು ಇತಿಹಾಸದ ಕುರುಹುಗಳನ್ನು ಉಳಿಸಿ ಹೋಗಿದ್ದಾರೆ. ರಾಜರ ಆಡಳಿತ, ದೇವಾಲಯದ ಗಡಿ, ಊರಿನ ಗಡಿ ತಿಳಿಸುವ ಅನೇಕ ಕುರುಹುಗಳನ್ನು ಈಗಲೂ ಕಾಣಬಹುದು. ಈ ರೀತಿ ಶಿಲೆಯಲ್ಲಿರುವ ಅಂಗೈ ಕೆತ್ತನೆಯ ಶಿಲೆಯು ಅಂದಿನ ನಾಡಿನ ಗಡಿಯನ್ನು ಸೂಚಿಸುತ್ತದೆ. ಇಂದಿಗೂ ಇದು ಇತಿಹಾಸದ ಭವ್ಯ ಪರಂಪರೆಗೆ ಸಾಕ್ಷಿಯಂತಿದೆ. ಇದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹೊನ್ನಾವರ ತಾಲ್ಲೂಕಿನ ಬಹುತೇಕ ಜೈನ ದೇವಾಲಯಗಳಲ್ಲಿ ಕಾಣಬಹುದು.

**– ಬಳಕೂರು ವಿ.ಎಸ್.ನಾಯಕ್, ಬೆಂಗಳೂರು**

